## ನನ್ನ ಓದು

ಉದ್ದೇಶ ನಮಗೆ ಕಾಣಿಸದೇ ಇರಬಹುದು ಅಥವಾ ನಮ್ಮ ಮಟ್ಟದಲ್ಲಿ ಅವುಗಳ ಅಗತ್ಯ ಇಲ್ಲದಿರಬಹುದು. ಆದರೆ, ಕೃತಿಯ ಒಟ್ಟಂದದ ದೃಷ್ಟಿಯಿಂದ ಅವು ಇರಬೇಕಾಗುತ್ತವೆ. ಜೇಮ್ಸ್ ಜಾಯ್ಸ್ ಹೇಳುವ ಸಿಗ್ನಿಫಿಕೆಂಟ್ ಡೀಟೇಲ್ಸ್ ತತ್ವಕ್ಕೆ ಬದ್ಧವಾಗಿಯೇ ಈ ವಿವರಗಳಿವೆ ಎಂದು ಒಪ್ಪಿಕೊಂಡು ಗಮನಿಸಿದರೆ ಇಲ್ಲಿನ ಅನಗತ್ಯ ವಿವರಗಳನ್ನೇ ನಿರ್ದಿಷ್ಟವಾಗಿ ಗಮನಿಸುವ ಮನೋಧರ್ಮ ನಮಗೆ ಸಿದ್ಧಿಸುತ್ತದೆ.

ಸಹಜವಾಗಿಯೇ ಭಾರತದ ಈ ಕಾದಂಬರಿಯ ವೇದಿಕೆ ಕುಟುಂಬ ವ್ಯವಸ್ಥೆ. ದೇಶ, ಭಾಷೆ, ಕಾಲ ಮತ್ತು ಚರಾಚರ ಜಗತ್ತಿನ ಒಳಗುಗೊಳ್ಳುವಿಕೆಯ ನೆಲೆಯಲ್ಲಿ ಗೀತಾಂಜಲಿ ಶ್ರೀಯವರ 'ಕುಟುಂಬ'ದ ಹರಹು, ವ್ಯಾಪ್ತಿ ವಿಸ್ತಾರಗಳ ಬಗ್ಗೆ ಹೇಳಿಯಾಗಿದೆ. ಉಗುರಿಗೊಬ್ಬ ಬೆರಳಿಗೊಬ್ಬ ಸ್ಪೆಶಲಿಸ್ಟ್‌ಗಳಿರುವ ಈ ಕಾಲದಲ್ಲಿ, ಬೆರಳು ಸರಿಸಿದ ಮಾತ್ರಕ್ಕೆ ಕಣ್ಣೆದುರಿನ ವಿಶ್ವವೇ ಬದಲಾಗುವ ಡಿಜಿಟಲ್ ಜಗತ್ತಿನಲ್ಲಿ ನಿಧಾನವೇ ಪ್ರಧಾನ ಎಂಬ ಮಾತು, ಡಿಜಿಟಲ್ ತೆರೆಯಾಚೆಯ ನೋಟವನ್ನು ಕಣ್ಣೊಳಕ್ಕೆ ಬಿಟ್ಟುಕೊಳ್ಳುವ ಮಾತು ಹಳೆಯದಾಯಿತು ಅನಿಸುವುದು ಸಹಜವೇ. ಆದರೆ, ಅದು ಈ ಕಾಲದ ಅಗತ್ಯ ಎಂಬ ಕೂಗು ಕ್ಷೀಣವಾಗಿಯಾದರೂ ಕೇಳಿಸತೊಡಗಿರುವುದು ನಿಜ. ಓಲ್ಗಾ ತೊಕಾರ್ಝುಕ್ ಅವರ ಕೃತಿ, 'The Lost Soul' ನೇರವಾಗಿಯೇ ಹೇಳುತ್ತಿದೆ, ''ಹಣದ ಹಿಂದೆ, ಹುದ್ದೆಯ ಹಿಂದೆ, ಹಕ್ಕಿನ ಹಿಂದೆ ಹೂಡಿದ ಓಟ ಸಾಕು ಮಾಡು, ನಿಧಾನಿಸು, ನಿಲ್ಲು, ಕ್ಷಣ ಕಾಲ ನಿಂತು ನಿನ್ನೊಳಗೆ ನೋಡು, ನೀನು ಏನನ್ನೋ ಬಿಟ್ಟು ಬಂದಿರುವಿ, ಅದಿಲ್ಲ ಈಗ ನಿನ್ನ ಜೊತೆ ಎನ್ನುವುದನ್ನು ಗಮನಿಸು''.

ದೈನಂದಿನ ಬದುಕಿನ ಅವೇ ಕ್ಷುಲ್ಲಕ ಸಂಗತಿಗಳು, ವಿಶೇಷ ಗಮನಕ್ಕೆ ಯೋಗ್ಯವಲ್ಲದವು, ಅವುಗಳಲ್ಲಿ ಹುದುಗಿದರೆ ಮತ್ತೆ ಮೇಲೆದ್ದು ಬರಲಾರದ ಕೊಳಕು ರಾಡಿಯದು ಎನ್ನುವ ಮಾತನ್ನೇ ಇಲ್ಲಿ ನಾವು ರೋಸಿಯ ಮಾತುಗಳಲ್ಲಿ ಕೇಳತೊಡಗುತ್ತೇವೆ. ಇಡೀ ಕಾದಂಬರಿಯಲ್ಲಿ ಓದುಗನ ಬೆನ್ನುಹುರಿಯಿಂದೆದ್ದು ಬರುವ ಒಂದು ರೋಮಾಂಚನವನ್ನು ಹುಟ್ಟಿಸುವ ಕೇಂದ್ರ ಇಲ್ಲಿದೆ. ಎಂದೂ ಮಾತಿನಲ್ಲಿ ತೋಡಿಕೊಳ್ಳದ, ದೈನಂದಿನಕ್ಕೆ ಅಗತ್ಯವಾದಷ್ಟೇ ವ್ಯಾವಹಾರಿಕ ಮಾತುಗಳನ್ನಾಡುವ ರೋಸಿ ಒಮ್ಮೆಗೇ ಆತ್ಮವುಳ್ಳ ಮಾತುಗಳನ್ನಾಡತೊಡಗುತ್ತಾಳೆ.

''ನನ್ನಂಥವರಿಗೆ ಪಾಸ್‌ಪೋರ್ಟಾದರೂ ಯಾಕೆ ಬೇಕು. ಅಸ್ತಿತ್ವವೇ ಇಲ್ಲದಂತಿರುವುದರಲ್ಲೂ ಕೆಲವು ಲಾಭವಿದೆಯಲ್ಲ. ನಮ್ಮನ್ನು ಯಾರೂ ಮುಸ್ಲಿಮರ ಜೊತೆಗೂ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ, ಕ್ರಿಶ್ಚಿಯನ್ನರ ಜೊತೆಗೂ ಸೇರಿಸುವುದಿಲ್ಲ. ಯಹೂದಿ, ಪಾರ್ಸಿ, ಹಿಂದೂ, ಗಂಡಸರು, ಹೆಂಗಸರು ಯಾರ ಜೊತೆಗೂ ನಮ್ಮನ್ನು ಸೇರಿಸುವುದಿಲ್ಲ. ನಮ್ಮ ಹೆಸರು ಅವರ ಬಾಯಲ್ಲಿ ಬರುವುದಿಲ್ಲ, ನಮ್ಮನ್ನು ಅವರು ಗೊತ್ತು ಎನ್ನುವುದಿಲ್ಲ. 'ನಿಜವಾಗಿ' ಇರುವುದು ಎನ್ನುವುದರ ಅರ್ಥವಾದರೂ ಏನಮ್ಮ? ಕನಸು ಮನಸಿನಿಂದ ಕೂಡಾ ನಾವು ಮಾಯವಾಗಬೇಕೆಂದು ಅವರು ಬಯಸುತ್ತಾರೆ. ಹಾಗಾಗಿ, ನಾವು ಎಲ್ಲಿಗೆ ಬೇಕಾದರೂ ಪರವಾನಗಿ ಇಲ್ಲದೇ ನುಸುಳಬಹುದು.''

ರೋಸಿಯ ಮಾತು ಮುಂದುವರಿದಂತೆಲ್ಲ ನಾವು ಎಂತಹ ಜಗತ್ತಿನಲ್ಲಿದ್ದೇವೆ, ಎಂತಹ ಬದುಕನ್ನು ಬದುಕುತ್ತಿದ್ದೇವೆ ಮತ್ತು ನಮ್ಮ ಜೊತೆಯವರಿಗೆ ಎಂತಹ ಬದುಕನ್ನು ಬದುಕಗೊಟ್ಟಿದ್ದೇವೆ ಎನ್ನುವ ಪ್ರಶ್ನೆಯೆದುರು ಕಣ್ಣಲ್ಲಿ ನೀರು ತುಂಬಿಕೊಂಡು ತಲೆತಗ್ಗಿಸಿ ನಿಲ್ಲುವಂತಾಗುತ್ತದೆ. ಇದು ಈ ಕಾದಂಬರಿಯ ಗುರುತ್ವ, ಮಹತ್ವ. ಎಲ್ಲರೂ ಹೇಳಿರುವಂತೆ ವಯಸ್ಸಾದ ಮುದುಕಿಯೊಬ್ಬಳ ಕತೆಯಲ್ಲ ಇದು. ಇದು ಗಂಡೂ ಅಲ್ಲದ, ಹೆಣ್ಣೂ ಅಲ್ಲದ, ಇನ್ನೂ ಆಟವಾಡಿಕೊಂಡಿರಬೇಕಾದ ವಯಸ್ಸಿನಲ್ಲಿ ದೌರ್ಜನ್ಯಕ್ಕೊಳಗಾಗಿ, ಪರದೇಶಿಯಾಗಿ, ಅಲೆಮಾರಿಯಾಗಿ, ನಿರ್ಗತಿಕಳಾಗಿ, ಸದಾ ಕುಹಕ, ನಿಂದೆಗಳಿಗೆದುರಾಗಿ ಬದುಕಿದ, ಬದುಕಿ ಸಮಾಜ ಸೇವಕಿಯಾಗಿ ಇನ್ನೆಷ್ಟೋ ಮಂದಿಗೆ ಬೆಳಕಾದ ವ್ಯಕ್ತಿಯ ದೌರ್ಭಾಗ್ಯದ ಕತೆ. ಮತ್ತು, ಇದಕ್ಕೆ ಕಾರಣರಾದ, ಹೊಣೆಗಾರರಾದ ನಮ್ಮ ನಿಮ್ಮದೇ ಕತೆ. ಬದುಕಿನುದ್ದಕ್ಕೂ ರೋಸಿಯ ಕೈಯಲ್ಲಿದ್ದುದು ಮುರಿದ ಬುದ್ಧನ ಒಂದು ಪ್ರತಿಮೆ, ಅವನ ಸಮಾಧಿ ಸ್ಥಿತ ಜೊತೆಗಾರಿಕೆ, ಮರುಳಿನ, ಮರಳಿನ ಮನೆ, ಸಮಾಧಿ.

●